'ಮದಲಿಂಗನ ಕಣಿವೆ' ಹಳೆಯದಾಯ್ತು; ಗೌಡರ ಮಲ್ಲಿ'ಯೂ ಹಳೆಯವಳೇ ! ಶ್ರೀ ಮರುಳಯ್ಯನವರ **'ಕೆಂಗಲ್ಲ ಮಲ್ಲಿ'** ಯ ಕರುಣ ಕತೆ ರಸಿಕರ ಚರ್ವಣೆಗೆ ಅನ್ನವಾದೀತು – ಎಂದು ನಾನು ಆಶಿಸಿದ್ದೇನೆ, **'ಹಿಮವಂತ'** ಎಂದು ರೂಢಿಸುವದಕ್ಕಿಂತ **'ಹೇಮಂತ'** ಸರಿಹೋಗದೇ ? ಇಂಥ 'ಮಶಕ'ಗಳನ್ನು ಹೊಡೆದು ಹಾರಿಸಿ, ಕತೆ ಹೊಸ ಆವೃತ್ತಿಗಳನ್ನು ಕಾಣಲಿ.

ಬಡತನವೊ ಒಡೆತನವೊ
ನುಡಿಯು ನೂರಾಗಿರಲಿ
ಒಂದಾಗಿ ಬನ್ನಿರೈ 'ಗುಡಿ' ಎತ್ತಲೆಂದು ! –
ಎಂಬ ಕರೆ ಸೋದರ ಕವಿಗಳಿಗೂ ಸ್ವಾಗತ ನೀಡಲಿ.
" ತೇಜಸ್ವಿನಾವಧೀತಮಸ್ತು
ಮಾವಿದ್ವಿಷಾವಹೈ" – ಈ ' ಸಂಜ್ಞಾನ'
ಇಂದಿನ ಲೋಕಕ್ಕೆ ಬೇಕು. ಕವಿಯ ಧ್ವನಿ ಅದು !

ಸಾಧನಕೇರಿ
ಧಾರವಾಡ
**ದ.ರಾ. ಬೇಂದ್ರೆ.**

## ಅರಿಕೆ

'ಕೆಂಗನ ಕಲ್ಲು' ನನ್ನ ಎರಡನೆಯ ಕವನ ಸಂಕಲನ 'ಶಿವತಾಂಡವ'ದ ಏಳು ವರ್ಷಗಳ ಮೇಲೆ ಇದು ಪ್ರಕಟವಾಗುತ್ತಲಿದೆ. ಹಲವರು ಗುರುಹಿರಿಯರ ಆಶೀರ್ವಾದದ ಫಲ ಈ ಕಿರುಕೃತಿ. ಅವರೆಲ್ಲರನ್ನೂ ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಮಮತೆಯಿಂದ ಮುನ್ನುಡಿ ಬರೆದುಕೊಟ್ಟ ಪೂಜ್ಯ ಶ್ರೀ ಬೇಂದ್ರೆಯವರಿಗೂ, ಆಶೀರ್ವಸಿದ ಗುರುವರ್ಯ ಶ್ರೀ ದೇ. ಜವರೇಗೌಡರವರಿಗೂ ನನ್ನ ಭಕ್ತಿಪೂರ್ವಕ ಪ್ರಣಾಮಗಳು.

ಶ್ರೀ ಎಂ.ಎಸ್. ವೃಷಭೇಂದ್ರಸ್ವಾಮಿಯವರು ನನ್ನ 'ಕೆಂಗನ ಕಲ್ಲು' ನೀಳ್ಗವನ ಬೆಳಕಿಗೆ ಬರಲು ಮುಖ್ಯ ಕಾರಣರಾಗಿದ್ದಾರೆ. ಅಚ್ಚಿನ ವೇಳೆಯಲ್ಲಿ ಶ್ರೀ ಹೆಚ್.ಎಸ್. ರಾಮಸ್ವಾಮಿಯವರೂ, ಶ್ರೀ ಕೆ.ಎಸ್. ಕೇಶವಮೂರ್ತಿಯವರೂ ತುಂಬ ಶ್ರಮಿಸಿದ್ದಾರೆ. 'ತಾಯಿನಾಡು' ಪತ್ರಿಕೆಯ ಸಂಪಾದಕರು ಪ್ರಸಿದ್ಧಿಸುವುದರ ಮೂಲಕ ಬಹಳ ಪ್ರೋತ್ಸಾಹಿಸಿದ್ದಾರೆ. ಶ್ರೀ ಎಸ್.ಜಿ. ಮಹೇಶ್ವರಯ್ಯ, ಶ್ರೀ ಹಂಪನಾ, ಶ್ರೀ ಕೆ. ನಾಗೇಂದ್ರಪ್ಪ ಮತ್ತು ಎನ್.ಎಸ್. ಬಸವರಾಜಯ್ಯ ಉತ್ತಮ ಸಲಹೆಗಳನ್ನಿತ್ತಿದ್ದಾರೆ; ಇವೆರೆಲ್ಲರಿಗೂ ನನ್ನ ಹೃತ್ಪೂರ್ವಕ ಪ್ರಣಾಮಗಳು.

ಶಿವಮೊಗ್ಗ
25–12–1962

**ಸಾ. ಶಿ. ಮರುಳಯ್ಯ**

## ಅರ್ಪಣೆ

ನನ್ನ ವಿದ್ಯಾಗುರುಗಳಾದ
ಪೂಜ್ಯ ಶ್ರೀ **ದೇ. ಜ. ಗೌ.** ಅವರ
ಸಾನ್ನಿಧ್ಯದಲ್ಲಿ ಭಕ್ತಿಪೂರ್ವಕವಾಗಿ

**ಸಾ. ಶಿ. ಮರುಳಯ್ಯ**

